ಡಾ॥ಹೆಚ್.ಸಿ. ಮಹದೇವಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರು)

ಅ. ದಿನಾಂಕ: 9.8.2004ರಂದು.

ಆ. ಗಾಯಿತ್ರಿ ಎಜುಕೇಶನ್ ಸೊಸೈಟಿ ಹುಳಿಯಾರ್, ತುಮಕೂರು ಜಿಲ್ಲೆ ಈ ಹೆಸರಿನಲ್ಲಿ ರಿಜಿಸ್ಟರ್ ನಂ ಎನ್.ಓ.ಸಿ/334/86–87 ದಿ. 6.3.87ರ ರೀತ್ಯ ನೋಂದಾಯಿಸಲಾಗಿದೆ. ಈ ಸಂಸ್ಥೆಯಲ್ಲಿ 9 ಜನ ಸದಸ್ಯರಿದ್ದು, ಎಲ್ಲರೂ ಸಾರ್ವಜನಿಕ ಸೇವೆಯಲ್ಲಿರುವವರಿದ್ದಾರೆ. ಈ ಸಂಸ್ಥೆಯು ಎಂಪ್ಲಾಯಿಮೆಂಟ್ ರಿಜೀಸ್ಟ್ರೇಶನ್‌ಗಳನ್ನು ಮಾಡುವುದು, ಪರಿಸರ ಮಾಲಿನ್ಯ ಬಗ್ಗೆ ಜಾಗೃತಿ, ಗ್ರಾಹಕರ ಆಂದೋಲನ ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡೆ, ಕುಡಿಯುವ ನೀರಿನ ಕಾರ್ಯಕ್ರಮ ಆರೋಗ್ಯ ಸಮ್ಮೇಳನಗಳನ್ನು ಏರ್ಪಡಿಸುವುದು. ಯುವಜನ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಮುಂತಾದವುಗಳನ್ನು ಹಮ್ಮಿಕೊಂಡಿರುತ್ತಾರೆ. ಕಾಲಕಾಲಕ್ಕೆ ಸಂಸ್ಥೆಯ ಲೆಕ್ಕ ಪತ್ರ ತಪಾಸಣೆಯನ್ನು ಸಹ ಮಾಡಿಸಲಾಗಿದೆ.

ಇ. ಇಲ್ಲ.

ಈ. ತಿಳಿದಿದೆ.

ಉ. ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

3740 (4591) : ಶ್ರೀ ಮನೋಹರ ಕಲ್ಲಪ್ಪ ಕಿನೇಕರ್ (ಉಚಗಾಂವ)

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಬೆಳಗಾಂ ತಾಲ್ಲೂಕಿನಲ್ಲಿ ಖಾಲಿ ಇರುವ ಪ್ರಾಥಮಿಕ ಹಾಗೂ ಪ್ರೌಢಶಾಲಾ ಸಹ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರ ಹುದ್ದೆಗಳ ಸಂಖ್ಯೆ ಎಷ್ಟು;

ಆ. ಹಾಗಿದ್ದಲ್ಲಿ ಸದರಿ ಹುದ್ದೆಗಳನ್ನು ತುಂಬಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ.

	ಸರ್ಕಾರಿ ಪ್ರಾಥಮಿಕ ಶಾಲೆ	ಸರ್ಕಾರಿ ಪ್ರೌಢಶಾಲೆ
ಮುಖ್ಯ ಶಿಕ್ಷಕರು	31	02
ಸಹ ಶಿಕ್ಷಕರು	03	06

ಆ. ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಶೀಘ್ರವೇ ಆದೇಶವನ್ನು ಹೊರಡಿಸಲಾಗುವುದು. ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ

ಖಾಲಿಯಿರುವ ಹುದ್ದೆಗಳ ಭರ್ತಿ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದ್ದು, ಶೀಘ್ರವೇ ಭರ್ತಿ ಮಾಡಲಾಗುವುದು. ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಅರ್ಹತೆ ಹೊಂದಿರುವ ಸಹ ಶಿಕ್ಷಕರ ಬಡ್ತಿ ಮೂಲಕ ಕೆ.ಸಿ.ಎಸ್.ಆರ್ ನಿಯಮ-32 ಪ್ರಕಾರ ಭರ್ತಿ ಮಾಡಲಾಗುವುದು. ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಖಾಲಿ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ನಡೆದಿದ್ದು ಶೀಘ್ರವೇ ಇದನ್ನು ಪೂರ್ಣಗೊಳಿಸಲಾಗುವುದು.

3741 (4592) ಶ್ರೀ ಮನೋಹರ ಕಲ್ಲಪ್ಪ ಕಿನೇಕರ್ (ಉಚಗಾಂವ)
ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಬೆಳಗಾಂ ಜಿಲ್ಲೆಯಲ್ಲಿನ ಖಾಸಗಿ ಶಾಲೆಗಳಲ್ಲಿ ಕನ್ನಡ, ಮರಾಠಿ ಮತ್ತು ಆಂಗ್ಲ ಭಾಷೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಪಠ್ಯಪುಸ್ತಕಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿದೆಯೇ;

ಆ. ಮಾರುಕಟ್ಟೆಯಲ್ಲಿ ಪಠ್ಯಪುಸ್ತಕಗಳ ಲಭ್ಯತೆ ಸರ್ಕಾರದ ಜವಾಬ್ದಾರಿಯಲ್ಲವೆ;

ಇ. ಹಾಗಿದ್ದಲ್ಲಿ ಮಾರುಕಟ್ಟೆಯಲ್ಲಿ ಪಠ್ಯ ಪುಸ್ತಕಗಳು ಲಭ್ಯವಿಲ್ಲವಿರುವುದರ ಕಾರಣವೇನು, ಮತ್ತು ಯಾವಾಗ ಲಭ್ಯವಾಗುತ್ತದೆ?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ. ಮಾರುಕಟ್ಟೆಯಲ್ಲಿ ಬಹುತೇಕ ಕನ್ನಡ, ಆಂಗ್ಲ ಮತ್ತು ಮರಾಠಿ ಪಠ್ಯಪುಸ್ತಕಗಳು ಲಭ್ಯವಿರುತ್ತದೆ.

ಆ. ಹೌದು.

ಇ. ಮಾರಕಟ್ಟೆಯಲ್ಲಿ ಕೆಲವು ಪುಸ್ತಕಗಳ ಕೊರತೆ ಇದೆ. ಈ ತೊಂದರೆಯನ್ನು ನಿವಾರಿಸಲು ಸರ್ಕಾರವು ಉಚಿತ ಪಠ್ಯಪುಸ್ತಕಗಳ ವಿತರಣೆಯಾದ ನಂತರ ಜಿಲ್ಲಾ ಮತ್ತು ತಾಲ್ಲೂಕು ಗೋದಾಮಗಳಲ್ಲಿ ಹೆಚ್ಚಿಗೆ ಉಳಿದ ಉಚಿತ ಪಠ್ಯಪುಸ್ತಕಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಆದೇಶಿಸಿದೆ. ಸರ್ಕಾರವು ಆಗಿಂದಾಗ್ಗೆ ಮುದ್ರಕರು ಮತ್ತು ವಿತರಕರ ಸಭೆಗಳನ್ನು ನಡೆಸಿ, ಪಠ್ಯಪುಸ್ತಕಗಳನ್ನು ತಕ್ಷಣವೇ ಮುದ್ರಿಸಿ ಸರಬರಾಜು ಮಾಡಲು ಆದೇಶಿಸಿದೆ.